# ನಿಮ್ಮೊಡನೆ

## ಕನ್ನಡ ಚಿತ್ರರಂಗದ ಅರಾಜಕತೆ

‘ಅವರಿಲ್ಲ, ಇವರಿಲ್ಲ ಅನ್ನೋದು ನೆಪ ಅಲ್ಲ. ಅವರಿದ್ದಾರೆ ಅಂದುಕೊಳ್ಳಬೇಕು. ಮೊದಲೆಲ್ಲ ಕೇಳೋರು, ಅದಕ್ಕೆ ಹೇಳೋರು. ಈಗ ಕೇಳೋರೆ ಇಲ್ಲ. ಕೇಳೋರೆ ಇಲ್ಲದಿದ್ದಾಗ ಹೇಳೋದೇನು ಬಂತು? ಈಗಂತೂ ಎಲ್ಲ ಗೊಂದಲ. ಪ್ರತಿಸಲವೂ ಡಿಸ್ಕಷನ್ ನಡೆಯುತ್ತೆ, ಡಿಸಿಷನ್ ಆಗಲ್ಲ. ಕಾನ್ವರ್‌ಸೇಷನ್ ನಡೆಯುತ್ತೆ, ಕನ್‌ಕ್ಲೂಷನ್ ಆಗಲ್ಲ... ಆದರೆ ನಮ್ಮಲ್ಲಿ ವ್ಯವಸ್ಥೆಯೇ ಸರಿ ಇಲ್ಲ. ಈಗ ವೃತ್ತಿಪರತೆಯೇ ಇಲ್ಲ...’ ಅನಿರೀಕ್ಷಿತವಾಗಿ ನಿರ್ಗಮಿಸುವ ಕೆಲವು ತಿಂಗಳ ಹಿಂದೆ ಹಿರಿಯ ಚಿತ್ರನಟ ವಿಷ್ಣುವರ್ಧನ್ ಸಂದರ್ಶನವೊಂದರಲ್ಲಿ ವ್ಯಕ್ತಪಡಿಸಿದ ಈ ಅಭಿಪ್ರಾಯಗಳು ಕನ್ನಡ ಚಿತ್ರರಂಗದ ಬಿಕ್ಕಟ್ಟಿನ ಬಗ್ಗೆ ವಸ್ತುಸ್ಥಿತಿಯ ಚಿತ್ರಣವನ್ನೇ ನೀಡುತ್ತವೆ. ಕನ್ನಡ ಚಿತ್ರಗಳ ದೊಡ್ಡ ಪ್ರಮಾಣದ ಪ್ರೇಕ್ಷಕರ ವರ್ಗವನ್ನೇ ‘ಅಭಿಮಾನಿ ದೇವರು’ಗಳೆಂದು ಗೌರವಿಸಿದ್ದ ವರನಟ ಡಾ.ರಾಜ್‌ಕುಮಾರ್ ನೇಪಥ್ಯಕ್ಕೆ ಸರಿದ ನಂತರ ಉದ್ಭವಿಸಿದ ಪರಿಸ್ಥಿತಿಯನ್ನು ಅವರು ಹೀಗೆ ಬಣ್ಣಿಸಿದ್ದರು. ಆ ಪರಿಸ್ಥಿತಿ ಈಗಲೂ ಬದಲಾಗಿಲ್ಲ. ಎಪ್ಪತ್ತೈದು ವರ್ಷಗಳ ಅನುಭವ ಕನ್ನಡ ಚಿತ್ರರಂಗವನ್ನು ಪ್ರಬುದ್ಧ ಸ್ಥಿತಿಗೆ ಕೊಂಡೊಯ್ದಿಲ್ಲ ಎಂಬುದು ಕನ್ನಡ ಚಲನಚಿತ್ರ ವಾಣಿಜ್ಯ ಮಂಡಲಿಯಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಂದ ವ್ಯಕ್ತವಾಗುತ್ತಿದೆ.

ಚಿತ್ರನಿರ್ಮಾಣ ಸೃಜನಶೀಲ ಪ್ರಕ್ರಿಯೆ. ನಿರ್ದೇಶಕನ ಕಲ್ಪನೆಯ ಮೂಸೆಯಲ್ಲಿ, ಕಲಾವಿದರ ಅಭಿನಯ ಪ್ರತಿಭೆಯನ್ನು ಎರಕ ಹೊಯ್ದು ರೂಪಿಸುವ ಕಲಾಕೃತಿಯೇ ಚಲನಚಿತ್ರ. ಕಥೆ, ಹಿನ್ನೆಲೆಯಲ್ಲಿ ಸಂಗೀತ, ಭಾವಾಭಿನಯದ ಉತ್ಕೃಷ್ಟತೆ, ಸನ್ನಿವೇಶ ಸಂಯೋಜನೆಯ ನಾಟಕೀಯ ಸೂತ್ರಗಳ ಕಾರಣ ಕಥಾಚಿತ್ರವೊಂದು ಬೀರುವ ಪರಿಣಾಮ ಅನನ್ಯ. ಚಲನಚಿತ್ರವನ್ನು ನೋಡಿ ಆನಂದದ ಅನುಭವ ಪಡೆಯಲು ಪ್ರೇಕ್ಷಕನಿಗೆ ಯಾವ ಪೂರ್ವ ಸಿದ್ಧತೆಯೂ ಬೇಕಿಲ್ಲ. ಅಕ್ಷರಸ್ಥನಿರಲಿ, ಅನಕ್ಷರಸ್ಥನಿರಲಿ, ಯಾವುದೇ ವಯಸ್ಸಿನವರಿರಲಿ, ಚಿತ್ರಪ್ರೇಕ್ಷಕರ ವ್ಯಾಪ್ತಿಗೆ ಮಿತಿಯಿಲ್ಲ. ಅಂಥ ಅರ್ಥಸಾಧ್ಯತೆಗಳ ಈ ಮನರಂಜನಾ ಮಾಧ್ಯಮಕ್ಕೆ ಅತ್ಯಾಧುನಿಕ ತಾಂತ್ರಿಕ ಆವಿಷ್ಕಾರಗಳು ಬಳಕೆಯಾದರೆ ಅವು ಬೀರುವ ಪರಿಣಾಮ ಸೀಮಾತೀತವಾದದ್ದು. ಸೃಜನಶೀಲತೆಯ ಪ್ರಕ್ರಿಯೆ ಸ್ಥಗಿತಗೊಂಡರೆ ಚಿತ್ರ ನಿರ್ಮಾಣ ಯಾಂತ್ರಿಕ ಉತ್ಪಾದನೆ. ಅದು ಸಾರವಿಲ್ಲದ ನೆಲದಲ್ಲಿ ಮೊಳೆಯದ ಬೀಜಗಳನ್ನು ಬಿತ್ತಿ ಹುಲುಸಾದ ಬೆಳೆಯನ್ನು ನಿರೀಕ್ಷಿಸುವಂಥ ವ್ಯರ್ಥ ಪ್ರಯತ್ನ.

ಸದ್ಯದ ಕನ್ನಡ ಚಿತ್ರರಂಗದಲ್ಲಿ ಈ ಪರಿಸ್ಥಿತಿ ಇದೆ ಎನ್ನುವುದಕ್ಕೆ ಕಾರಣಗಳಿವೆ. ಚಿತ್ರನಿರ್ಮಾಣ ವೆಚ್ಚ ಕೋಟಿಗಳಲ್ಲಿದೆ. ವರ್ಷಕ್ಕೆ ನೂರಕ್ಕೂ ಹೆಚ್ಚು ಚಿತ್ರಗಳು ನಿರ್ಮಾಣವಾಗುತ್ತವೆ. ಅಪರೂಪಕ್ಕೆ ಕೆಲವು ಚಿತ್ರಗಳಷ್ಟೆ ಹಾಕಿದ ಬಂಡವಾಳವನ್ನು ಗಳಿಸಿಕೊಡುತ್ತವೆ. ಲಾಭ ತಂದುಕೊಡುವ ಚಿತ್ರಗಳ ಸಂಖ್ಯೆ ಬೆರಳೆಣಿಕೆಯಷ್ಟು. ಲಾಭವೇ ಬರದಿದ್ದರೆ ಯಾವ ಉದ್ಯಮವೂ ಬೆಳೆಯುವುದಿಲ್ಲ. ಬಿಡುಗಡೆಯಾದ ಚಿತ್ರಗಳೆಲ್ಲ ಸೋಲು ಕಾಣುತ್ತಿದ್ದರೆ ಹೊಸ ಚಿತ್ರಗಳು ನಿರ್ಮಾಣವಾಗುವುದೆಂತು? ಪ್ರೇಕ್ಷಕರು ಚಿತ್ರಮಂದಿರಗಳಿಗೆ ಯಾಕೆ ಬರುತ್ತಿಲ್ಲ ಎಂಬುದಕ್ಕೆ ಉದ್ಯಮದವರು ಕಂಡುಕೊಂಡ ಕಾರಣ ಪೈರಸಿ. ಚಿತ್ರಗಳ ನಕಲು ಆವೃತ್ತಿಗಳ ಕಳ್ಳವ್ಯಾಪಾರ ಹಣ ಹೂಡುವ ನಿರ್ಮಾಪಕನ ಜೇಬಿಗೆ ತೂತು ಕೊರೆಯುವುದನ್ನು ಕಠಿಣ ಕಾನೂನು ಮೂಲಕ ತಡೆಯಬೇಕು ಎಂಬುದು ಉದ್ಯಮದವರು ಸೂಚಿಸುವ ಪರಿಹಾರ. ಚಿತ್ರಮಂದಿರಗಳು ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು, ಪರಭಾಷೆಯ ಚಿತ್ರಗಳ ಬಿಡುಗಡೆಗೆ ನಿರ್ಬಂಧಗಳಿರಬೇಕು ಎಂಬಂಥ ಷರತ್ತುಗಳನ್ನು ಚಿತ್ರೋದ್ಯಮದ ವಿವಿಧ ವಿಭಾಗಗಳ ಹಿತರಕ್ಷಣೆಯ ಹೊಣೆ ಹೊತ್ತ ಚಲನಚಿತ್ರ ವಾಣಿಜ್ಯ ಮಂಡಲಿ ಮಂಡಿಸಿದೆ. ಉದ್ಯಮದ ಪ್ರಾತಿನಿಧಿಕ ಸಂಸ್ಥೆಯಾಗಿರುವುದರಿಂದ ಅದರ ಅಭಿಪ್ರಾಯಗಳಿಗೆ ಚಿತ್ರನಿರ್ಮಾಪಕರು, ನಿರ್ದೇಶಕರು, ಕಲಾವಿದರು, ತಂತ್ರಜ್ಞರು, ಪ್ರದರ್ಶಕರು, ಹಂಚಿಕೆದಾರರು ಮೊದಲಾಗಿ ಉದ್ಯಮಕ್ಕೆ ಸಂಬಂಧಿಸಿದವರು ಸ್ಪಂದಿಸಬೇಕು. ಆದರೆ ಹೀಗೆ ಆಗುತ್ತಿಲ್ಲ ಎಂಬುದೇ ವಾಸ್ತವ ಸಂಗತಿ.

ಚಿತ್ರನಿರ್ಮಾಣದ ಎಲ್ಲ ವಲಯಗಳನ್ನು ಒಂದಾಗಿ ಕರೆದೊಯ್ಯಬಲ್ಲ ನಾಯಕತ್ವದ ಕೊರತೆ ಈಗಿನದು. ಜನರ ಬೆಂಬಲವನ್ನೇ ಸಂಪೂರ್ಣ ಅವಲಂಬಿಸಿದ ಈ ಕ್ಷೇತ್ರದಲ್ಲಿ ಪ್ರತಿ ಚಿತ್ರದ ನಿರ್ಮಾಣವೂ ಒಂದು ಸವಾಲು. ಒಂದು ಮಾದರಿಯನ್ನು ಮೆಚ್ಚುವ ಅಭಿಮಾನಿ ದೇವರು ಅದರ ನಕಲನ್ನು ಮೆಚ್ಚಲಾರ ಎಂಬುದನ್ನು ಅರ್ಥ ಮಾಡಿಕೊಳ್ಳದಿದ್ದರೆ ಬೆಳೆಯುವುದು ಸುಲಭವಲ್ಲ. ತನಗೆ ಯಾವುದು ಬೇಕು ಎಂಬುದನ್ನು ನಿರ್ಧರಿಸುವಷ್ಟು ಪ್ರೇಕ್ಷಕ ಬೆಳೆದಿದ್ದಾನೆ. ಅದನ್ನು ಅರ್ಥ ಮಾಡಿಕೊಳ್ಳದಿದ್ದರೆ ಯಾವ ಕ್ಷೇತ್ರವೂ ಬೆಳೆಯಲಾರದು. ಚಿತ್ರರಂಗಕ್ಕೂ ಈ ಮಾತು ಹೆಚ್ಚು ಅನ್ವಯವಾಗುತ್ತದೆ.

■ ಲಕ್ಷ್ಮಣ ಕೊಡಸೆ

‘ಅವರಿಲ್ಲ, ಇವರಿಲ್ಲ ಅನ್ನೋದು ನೆಪ ಅಲ್ಲ. ಅವರಿದ್ದಾರೆ ಅಂದುಕೊಳ್ಳಬೇಕು. ಮೊದಲೆಲ್ಲ ಕೇಳೋರು, ಅದಕ್ಕೆ ಹೇಳೋರು. ಈಗ ಕೇಳೋರೆ ಇಲ್ಲ. ಕೇಳೋರೆ ಇಲ್ಲದಿದ್ದಾಗ ಹೇಳೋದೇನು ಬಂತು? ಈಗಂತೂ ಎಲ್ಲ ಗೊಂದಲ. ಪ್ರತಿಸಲವೂ ಡಿಸ್ಕಷನ್ ನಡೆಯುತ್ತೆ, ಡಿಸಿಷನ್ ಆಗಲ್ಲ. ಕಾನ್ವರ್‌ಸೇಷನ್ ನಡೆಯುತ್ತೆ, ಕನ್‌ಕ್ಲೂಷನ್ ಆಗಲ್ಲ... ಆದರೆ ನಮ್ಮಲ್ಲಿ ವ್ಯವಸ್ಥೆಯೇ ಸರಿ ಇಲ್ಲ. ಈಗ ವೃತ್ತಿಪರತೆಯೇ ಇಲ್ಲ...’ ಹಿರಿಯ ಚಿತ್ರನಟ ವಿಷ್ಣುವರ್ಧನ್ ಸಂದರ್ಶನವೊಂದರಲ್ಲಿ ವ್ಯಕ್ತಪಡಿಸಿದ ಈ ಅಭಿಪ್ರಾಯಗಳು ಕನ್ನಡ ಚಿತ್ರರಂಗದ ಬಿಕ್ಕಟ್ಟಿನ ಬಗ್ಗೆ ವಸ್ತುಸ್ಥಿತಿಯ ಚಿತ್ರಣವನ್ನೇ ನೀಡುತ್ತವೆ.

